# ಉಪ ತಹಶೀಲ್ದಾರರ ನ್ಯಾಯಾಲಯ, ಹಂಪಸಾಗರ-583214

OFFICE OF THE DEPUTY TAHASILDAR, HAMPASAGARA-583214

ಎ.ವಿಲೇ.ನಂ.ಕಂ.ಪಹಣಿ.ವಿವಾದ/55/2014-15 ದಿನಾಂಕ: 28 .07.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ಹಂಪಸಾಗರ

<u>ವಾದಿ (ಶ್ರೀ/ಶ್ರೀಮತಿ)</u>

ಚಿಗರಿ ಕರಿಯಮ್ಮ ಗಂಡ ಕೊಟ್ರಬಸಪ್ಪ ಗದ್ದಿಕೇರಿ
ಗ್ರಾಮ ಹಬೊ ಹಳ್ಳಿ ತಾಲೂಕು

<u>ಪ್ರತಿವಾದಿ (ಶ್ರೀ/ಶ್ರೀಮತಿ)</u>

ಚಿಗರಿ ಬಸವರಾಜಪ್ಪ ತಂದೆ ಬುಳ್ಳಪ್ಪ ಗದ್ದಿಕೇರಿ
ಗ್ರಾಮ ಹಬೋ ಹಳ್ಳಿ ತಾಲೂಕು

<u>ವ್ಯಾಜ್ಯದ ಜಮೀನಿನ ವಿವರ</u>

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಅಡವಿ ಕ್ಯಾದಿಗಿಹಳ್ಳಿ | 3ಬಿ | 3.44 |

*****

<u>ಪೀಠಿಕೆ:</u>

ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಅಡವಿಕ್ಯಾದಿಗಿಹಳ್ಳಿ ಗ್ರಾಮದ ಸ.ನಂ. 3ಬಿ ವಿಸ್ತೀರ್ಣ 3.44 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್19/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ: 05.05.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಕೊಟ್ರಬಸಪ್ಪ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:13.06.1988 ರಂದು ಮರಣ ಹೊಂದಿದ್ದು ಸದರಿಯವರ ಮರಣಾ ನಂತರ ವ್ಯಾಜ್ಯದ ಜಮೀನಿಗೆ ನೇರ ವಾರಸುದಾರರಾದ ಕರಿಯಮ್ಮ ಗಂಡ ಕೊಟ್ರಬಸಪ್ಪ ಇವರ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಹಕ್ಕು ಬದಕಲಾವಣೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು ದಿನಾಂಕ:10.02.2015 ರಂದು ಲಿಖಿತ ತಕರಾರನ್ನು ಸಲ್ಲಿಸುತ್ತಾ ಪ್ರಸ್ತುತ ಹಕ್ಕುಬದಲಾವಣೆಯನ್ನು ಮಾಡದಂತೆ ಕೋರಿರುತ್ತಾರೆ. ಉಭಯ ಪಕ್ಷಕಾರರಿಗೆ ನೋಟೀಸ್ ಜಾರಿಯಾಗಿದ್ದರೂ ಸದರಿಯವರು ವಿಚಾರಣೆಗೆ ಸತತವಾಗಿ ಗೈರು ಹಾಜರಾಗಿರುತ್ತಾರೆ ಹಾಗೂ ಸದರಿ ಪ್ರಕರಣದ ಅಂತಿಮ ತೀರ್ಮಾನವನ್ನು ಕೈಗೊಳ್ಳಲು ಪೂರಕ ದಾಖಲೆಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ ಅಲ್ಲದೇ ವ್ಯಾಜ್ಯದ ಜಮೀನಿನ ಪಟ್ಟಾದಾರರ ಹೆಸರು ಕ್ಯಾದಿಗಿಹಳ್ಳಿ ಕೊಟ್ರಬಸಪ್ಪ ಎಂದೂ ಹಾಗೂ ಮನವಿದಾರರು ಚಿಗರಿ ಕರಿಯಮ್ಮ ಗಂಡ ಕೊಟ್ರಬಸಪ್ಪ ಎಂದು ನಮೂದು ಇದ್ದು ಹೆಸರಿನಲ್ಲಿ ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ, ಪ್ರಸ್ತುತ ಪ್ರಕರಣವನ್ನು ಪೂರಕ ದಾಖಲೆಗಳು ಲಭ್ಯವಿಲ್ಲದೇ ಇರುವುದರಿಂದ ಈ ಹಂತದಲ್ಲಿಯೇ ಮುಕ್ತಾಯಗೊಳಿಸಲು ತೀರ್ಮಾನಿಸಿ ಆದೇಶಿಸಬಹುದಾಗಿರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಅಡವಿಕ್ಯಾದಿಗಿಹಳ್ಳಿ ಗ್ರಾಮದ ಸ.ನಂ. 3ಬಿ ವಿಸ್ತೀರ್ಣ 3.44 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ:28 .07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ಹಂಪಸಾಗರ

ಉಪ ತಹಶೀಲ್ದಾರರು,
ಹಂಪಸಾಗರ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

DESPATCHED 04/8/16